ಸರ್ಕಾರದಿಂದ ಆಚರಿಸಲಾಗಿರುವ ವಿವಿಧ ಜಯಂತಿಗಳು

5152 (5838); ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ)

ಅ) ರಾಜ್ಯದಲ್ಲಿ ಸರ್ಕಾರದ ವತಿಯಿಂದ ಆಚರಿಸಲಾಗುತ್ತಿರುವ ವಿವಿಧ ಜಯಂತಿಗಳಾವುವು; (ಜಯಂತಿಗಳ ವೈಶಿಷ್ಟ್ಯತೆಯೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು);

ಆ) ಈ ಜಯಂತಿಗಳನ್ನು ಆಚರಿಸಲು ಸರ್ಕಾರದಿಂದ ನಿಗಧಿಪಡಿಸಿ ಬಿಡುಗಡೆ ಮಾಡಲಾಗುತ್ತಿರುವ ಅನುದಾನವೆಷ್ಟು; (ಜಯಂತಿವಾರು, ಜಿಲ್ಲಾವಾರು ಹಾಗೂ ತಾಲ್ಲೂಕುವಾರು ಮಾಹಿತಿ ನೀಡುವುದು);

ಇ) ಜಯಂತಿಗಳ ಆಚರಣೆಗೆ ಬಿಡುಗಡೆ ಮಾಡಲಾಗುತ್ತಿರುವ ಅನುದಾನದಲ್ಲಿ ತಾರತಮ್ಯವಾಗುತ್ತಿರುವ ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು;

ಈ) ತಾರತಮ್ಯವನ್ನು ಹೋಗಲಾಡಿಸಲು ಸರ್ಕಾರ ಗಂಭೀರ ಚಿಂತನೆ ನಡೆಸಿದೆಯೇ (ಸಂಪೂರ್ಣ ಮಾಹಿತಿ ನೀಡುವುದು);

ಶ್ರೀ ಹೆಚ್. ಆಂಜನೇಯ (ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ಸಚಿವರು)

ಅ) ಸಮಾಜ ಕಲ್ಯಾಣ ಇಲಾಖೆ:–

ದಿನಾಂಕ:05–04–2015	ಡಾ॥ ಬಾಬು ಜಗಜೀವನ ರಾಂ ಜಯಂತಿ
ದಿನಾಂಕ:14–04–2015	ಡಾ॥ ಬಿ.ಆರ್. ಅಂಬೇಡ್ಕರ್ ಜಯಂತಿ

- ಸದರಿ ಜಯಂತಿಗಳನ್ನು ರಾಜ್ಯ ಮಟ್ಟದ ಕಾರ್ಯಕ್ರಮವನ್ನಾಗಿ ಆಚರಿಸಲಾಗುತ್ತಿದ್ದು ವಿಧಾನಸೌಧದ ಬ್ಯಾಂಕ್ವೇಟ್‌ಹಾಲ್‌ನಲ್ಲಿ ಸಮಾರಂಭವನ್ನು ನಡೆಸಲಾಗುತ್ತದೆ.

- ದಿನಾಂಕ: 05-04-2015 ರಂದು ನಡೆದ ಡಾ॥ ಬಾಬು ಜಗಜೀವನ ರಾಂ ಜಯಂತಿಯ ದಿನದಂದು ಗಣ್ಯರೊಬ್ಬರಿಗೆ ರೂ. 5.00 ಲಕ್ಷಗಳ ನಗದು ಪುರಸ್ಕಾರ ಹಾಗೂ ಬಂಗಾರದ ಪದಕ ಮತ್ತು ಪ್ರಶಸ್ತಿ ಪ್ರಧಾನ ಮಾಡಲಾಗುವುದು.

- ದಿನಾಂಕ: 14-04-2015 ರಂದು ನಡೆದ ಡಾ॥ ಬಿ.ಆರ್. ಅಂಬೇಡ್ಕರ್ ಜಯಂತಿಯ ದಿನದಂದು ಗಣ್ಯರೊಬ್ಬರಿಗೆ ರೂ. 5.00 ಲಕ್ಷಗಳ ನಗದು ಪುರಸ್ಕಾರ ಹಾಗೂ ಬಂಗಾದರ ಪದಕ ಮತ್ತು ಪ್ರಶಸ್ತಿ ಪ್ರಧಾನ ಮಾಡಲಾಗುವುದು.

- ರಾಜ್ಯದ ವಿವಿಧ ಕಲಾತಂಡಗಳಿಂದ ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆಸಲಾಗುತ್ತದೆ.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಆಚರಿಸಲಾಗುತ್ತಿದೆ.

- ರೂ. 5.00 ಲಕ್ಷಗಳ ನಗದು ಪುರಸ್ಕಾರ ಹಾಗೂ ಬಂಗಾರದ ಪದಕ ಮತ್ತು ಪ್ರಶಸ್ತಿ ಪ್ರಧಾನ ಮಾಡಲಾಗುವುದು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಮಾಜಿ ಮುಖ್ಯಮಂತ್ರಿ ಡಿ ದೇವರಾಜ ಅರಸು ರವರ ಜನ್ಮದಿನಾಚರಣೆಯನ್ನು ಪ್ರತಿ ವರ್ಷ ಆಗಸ್ಟ್ 20 ರಂದು ಆಚರಿಸಲಾಗುತ್ತಿದೆ.

ಆ) **ಸಮಾಜ ಕಲ್ಯಾಣ ಇಲಾಖೆ:-** ಜಯಂತಿ ಕಾರ್ಯಕ್ರಮಗಳನ್ನು ಆಚರಿಸಲು ಸರ್ಕಾರದಿಂದ ನಿಗದಿಯಾದ ಅನುದಾನ ರೂ. 100.00/- ಲಕ್ಷಗಳು ಜಿಲ್ಲಾವಾರು ಹಾಗೂ ತಾಲ್ಲೂಕುವಾರು ಬಿಡುಗಡೆಯಾದ ಅನುದಾನದ ವಿವರವನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ:– ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಆಚರಿಸಲು ಜಿಲ್ಲಾ ಮತ್ತು ತಾಲ್ಲೂಕುಗಳಿಗೆ ಬಿಡುಗಡೆ ಮಾಡಲಾದ ಅನುದಾನದ **ವಿವರವನ್ನು ಅನುಬಂಧ–2 ರಲ್ಲಿ ನೀಡಲಾಗಿದೆ.**

1. **ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ** ರಾಜ್ಯಮಟ್ಟದಲ್ಲಿ ಅಂದರೆ ಬೆಂಗಳೂರಿನಲ್ಲಿ ಡಿ ದೇವರಾಜ ಅರಸು ರವರ ಜನ್ಮದಿನಾಚರಣೆಯನ್ನು ಆಚರಿಸಲು ಪ್ರತಿ ವರ್ಷ ರೂ 25.00 ಲಕ್ಷಗಳ ಅನುದಾನವನ್ನು ನಿಗದಿಪಡಿಸಲಾಗುತ್ತದೆ.
2. 2015–16 ನೇ ಸಾಲಿಗೆ ಡಿ ದೇವರಾಜ ಅರಸುರವರ ಜನ್ಮದಿನಾಚರಣೆಯನ್ನು ಜಿಲ್ಲೆಗಳಲ್ಲಿ ಆಚರಿಸಲು ರಾಜ್ಯದ ಎಲ್ಲಾ 30 ಜಿಲ್ಲೆಗಳಿಗೆ ತಲಾ ರೂ 35,000/– ದಂತೆ ಒಟ್ಟು ರೂ. 10.50 ಲಕ್ಷಗಳ ಆಯವ್ಯಯವನ್ನು ಒದಗಿಸಲಾಗಿದೆ.

ಇ) ಬಂದಿರುವುದಿಲ್ಲ

ಈ) ಅನ್ವಯಿಸುವುದಿಲ್ಲ

ಅನುಬಂಧ-I

2015-ನೇ ಸಾಲಿನಲ್ಲಿ ದಿನಾಂಕ: 05-04-2015 ರಂದು ಹಾಲು ಜಗಜೀವನ ರಾಮ್ ರವರ 107ನೇ ಜನ್ಮ ದಿನಾಚರಣೆಯನ್ನು ಹಾಗೂ ದಿನಾಂಕ 14-04-2015 ರಂದು ಡಾ॥ ಬಿ.ಆರ್. ಅಂಬೇಡ್ಕರ್ ರವರ 123ನೇ ಜನ್ಮ ದಿನಾಚರಣೆಯನ್ನು ಆಚರಿಸಲು ಅನುದಾನ ಬಿಡುಗಡೆ ಮಾಡಿರುವ ಬಗ್ಗೆ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಿದ ಅನುದಾನ (ಪ್ರತಿ ಕಾರ್ಯಕ್ರಮಕ್ಕೆ ರೂ. 25,000/- ದಂತೆ ಒಟ್ಟು ರೂ 50,000/-)	ತಾಲೂಕುಗಳಿಗೆ ಬಿಡುಗಡೆ ಮಾಡಿದ ಅನುದಾನ (ಪ್ರತಿ ಕಾರ್ಯಕ್ರಮಕ್ಕೆ ರೂ. 5,000/- ದಂತೆ ಒಟ್ಟು ರೂ. 10,000/-)		ಜಿಲ್ಲಾಧಿಕಾರಿಗಳು ಹಾಗೂ ತಾಲೂಕಿನ ಇಂಡ ಭಾಗಕ್ಕೆ ಬಿಡುಗಡೆ ಮಾಡಿದ ಒಟ್ಟು ಅನುದಾನ (ರೂ ಗಳಲ್ಲಿ
1	BANGALORE URBAN	-	1	10000	10000
2	BANGALORE RURAL	-	4	40000	40000
3	CHITRADURGA	50000	5	50000	100000
4	DAVANAGERE	50000	5	50000	100000
5	KOLAR	50000	4	40000	90000
6	TUMKUR	50000	9	90000	140000
7	SHIMOGA	50000	6	60000	110000
8	RAMNAGAR	50000	3	30000	80000
9	CHIKKABALLAPUR	50000	5	50000	100000
10	MYSORE	50000	6	60000	110000
11	CHAMARAJNAGAR	50000	3	30000	80000
12	MANDYA	50000	6	60000	110000
13	HASSAN	50000	7	70000	120000
14	CHIKMAGALORE	50000	6	60000	110000
15	KODAGU	50000	2	20000	70000
16	DAKSHINA KANNADA	50000	4	40000	90000
17	UDUPI	50000	2	20000	70000
18	BELGAUM	50000	9	90000	140000
19	BIJAPUR	50000	4	40000	90000
20	BAGALAKOTE	50000	5	50000	100000
21	DHARWAD	50000	3	30000	80000
22	GADAG	50000	4	40000	90000
23	HAVERI	50000	6	60000	110000
24	UTTAR KANADA	50000	10	100000	150000
25	GULBARGA	50000	6	60000	110000
26	RAICHUR	50000	4	40000	90000
27	KOPPAL	50000	3	30000	80000
28	BELLARY	50000	6	60000	110000
29	BIDAR	50000	4	40000	90000
30	YADGIR	50000	2	20000	70000
	TOTAL	1400000	144	1440000	2840000

Kan Br 2015-16

ಸಂಖ್ಯೆ-೩

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ. ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) ರವರ ಬುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 5838ಕ್ಕೆ ಅನುಬಂಧ –೨

ಕ್ರ ಸಂ	ಜಿಲ್ಲೆಗಳು	ಜಿಲ್ಲಾ ಕೇಂದ್ರಕ್ಕೆ ರೂ. 50,000/–ರಂತೆ ಪಾವತಿಸಬೇಕಾದ ಮೊತ್ತ	ತಾಲ್ಲೂಕು ಕೇಂದ್ರಗಳಿಗೆ ತಲಾ ರೂ.10,000/– ರಂತೆ ಪಾವತಿಸಬೇಕಾದ ಮೊತ್ತ	ಜಿಲ್ಲೆ ಮತ್ತು ತಾಲ್ಲೂಕಿನ ಒಟ್ಟು ಮೊತ್ತ
1	ಬೆಂಗಳೂರು (ನ)	0	10000	10000
2	ಬೆಂಗಳೂರು (ಗ್ರಾ)	0	40000	40000
3	ಚಿತ್ರದುರ್ಗ	50000	60000	110000
4	ಶಿವಮೊಗ್ಗ	50000	70000	120000
5	ತುಮಕೂರು	50000	100000	150000
6	ಮೈಸೂರು	50000	70000	120000
7	ಚಿಕ್ಕಮಗಳೂರು	50000	70000	120000
8	ದಕ್ಷಿಣ ಕನ್ನಡ	50000	50000	100000
9	ಹಾಸನ	50000	80000	130000
10	ಕೊಡಗು	50000	30000	80000
11	ಮಂಡ್ಯ	50000	70000	120000
12	ಬೆಳಗಾಂ	50000	100000	150000
13	ಬಿಜಾಪುರ	50000	50000	100000
14	ಧಾರವಾಡ	50000	50000	100000
15	ಉತ್ತರ-ಕನ್ನಡ	50000	110000	160000
16	ಗುಲ್ಬರ್ಗಾ	50000	70000	120000
17	ಬಳ್ಳಾರಿ	50000	70000	120000
18	ಬೀದರ್	50000	50000	100000
19	ರಾಯಚೂರು	50000	50000	100000
20	ದಾವಣಗೆರೆ	50000	60000	110000
21	ರಾಮನಗರ	50000	40000	90000
22	ಚಿಕ್ಕಬಳ್ಳಾಪುರ	50000	60000	110000
23	ಚಾಮರಾಜನಗರ	50000	40000	90000
24	ಉಡುಪಿ	50000	30000	80000
25	ಬಾಗಲಕೋಟೆ	50000	60000	110000
26	ಗದಗ	50000	50000	100000
27	ಹಾವೇರಿ	50000	70000	120000
28	ಕೊಪ್ಪಳ	50000	40000	90000
29	ಕೋಲಾರ	50000	50000	100000
30	ಯಾದಗಿರಿ	50000	30000	80000
	ಒಟ್ಟು	1400000	1730000	3130000

ಮಹಿಳಾ ವಸತಿ ನಿಲಯಕ್ಕೆ ಕಟ್ಟಡ ನಿರ್ಮಾಣ

5154 (5350); ಶ್ರೀ ಮಾನಪ್ಪ ಡಿ. ವಜ್ಜಲ್ (ಲಿಂಗಸಗೂರು)

ಅ) ರಾಯಚೂರು ಜಿಲ್ಲೆ ಲಿಂಗಸೂಗೂರು ತಾಲ್ಲೂಕಿನ ಪೈದೊಡ್ಡಿ ಗ್ರಾಮದಲ್ಲಿ ಮಹಿಳಾ ವಸತಿ ನಿಲಯಕ್ಕೆ ಸೂಕ್ತ ಕಟ್ಟಡ ಇಲ್ಲದೆ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಸರ್ಕಾರವು ಪ್ರಸಕ್ತ ಸಾಲಿನಲ್ಲಿ ಮಹಿಳಾ ವಸತಿ ನಿಲಯದ ಕಟ್ಟಡ ನಿರ್ಮಾಣಕ್ಕಾಗಿ ಅವಶ್ಯವಿರುವ ಅನುದಾನ ಬಿಡುಗಡೆ ಮಾಡಲು ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ವಿವರಗಳನ್ನು ನೀಡುವುದು)?

ಶ್ರೀ ಹೆಚ್. ಆಂಜನೇಯ (ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

ಅ) ರಾಯಚೂರು ಜಿಲ್ಲೆ, ಲಿಂಗಸೂಗೂರು ತಾಲ್ಲೂಕಿನ ಪೈದೊಡ್ಡಿ ಗ್ರಾಮದಲ್ಲಿ ಪರಿಶಿಷ್ಟ ಜಾತಿ/ಪಂಗಡದ ಯಾವುದೇ ಮಹಿಳಾ ವಸತಿ ನಿಲಯವನ್ನು ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ನಡೆಸುತ್ತಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ

ಆಯುರ್ವೇದ ಆಸ್ಪತ್ರೆ ಮತ್ತು ಕಾಲೇಜು ಪ್ರಾರಂಭಿಸುವುದು

5155 (5351); ಶ್ರೀ ಮಾನಪ್ಪ ಡಿ. ವಜ್ಜಲ್ (ಲಿಂಗಸುಗೂರು)

ಅ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ಕೇಂದ್ರ ಸ್ಥಾನದಲ್ಲಿ ಆಯುರ್ವೇದ ಆಸ್ಪತ್ರೆ ಇಲ್ಲದೆ ದೂರದ ಪ್ರದೇಶಕ್ಕೆ ಹೋಗಿ ಚಿಕಿತ್ಸೆ

ಪಡೆಯಬೇಕಾಗಿರುವುದರಿಂದ ರೋಗಿಗಳಿಗೆ ತುಂಬಾ ತೊಂದರೆಯಾಗುತ್ತಿರುವುದು ನಿಜವೇ;

ಆ) ಹಾಗಿದ್ದಲ್ಲಿ, ಲಿಂಗಸುಗೂರು ತಾಲ್ಲೂಕಿನ ಕೇಂದ್ರ ಸ್ಥಾನದಲ್ಲಿ ಆಯುರ್ವೇದ ಆಸ್ಪತ್ರೆ ಹಾಗೂ ಕಾಲೇಜನ್ನು ಪ್ರಾರಂಭಿಸಲು ಸರ್ಕಾರಕ್ಕಿರುವ ತೊಂದರೆಗಳೇನು; (ಪೂರ್ಣ ವಿವರ ನೀಡುವುದು)?

ಶ್ರೀ ಯು.ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ನಿಜವಲ್ಲ.

ಆ) 2013–14ನೇ ಸಾಲಿನ ಬಜೆಟ್ ಭಾಷಣದಲ್ಲಿ ಘೋಷಿಸಿದಂತೆ ಈಗಾಗಲೇ ಲಿಂಗಸುಗೂರು ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ 10 ಹಾಸಿಗೆಗಳ ಆಯುಷ್ ಘಟಕವನ್ನು ಪ್ರಾರಂಭಿಸಲು ಸರ್ಕಾರವು ಮಂಜೂರಾತಿ ನೀಡಿದ್ದು, ತಾತ್ಕಾಲಿಕವಾಗಿ ಆಯುರ್ವೇದ ಆಸ್ಪತ್ರೆಯನ್ನು ಪ್ರಾರಂಭಿಸಿ ಸಾರ್ವಜನಿಕರಿಗೆ ಆಯುಷ್ ಪದ್ಧತಿಗಳ ಚಿಕಿತ್ಸಾ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ. ಪ್ರತಿ ತಿಂಗಳು ಸರಾಸರಿ 150 ರಿಂದ 200 ಹೊರರೋಗಿಗಳು ಈ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆಯುತ್ತಿರುತ್ತಾರೆ. ಈ ಆಸ್ಪತ್ರೆಗೆ ಅಗತ್ಯ ಹುದ್ದೆಗಳ ಸೃಜಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿದ್ದು, ಹುದ್ದೆಗಳ ಸೃಜನೆಯಾದ ನಂತರ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿ ಆಯುರ್ವೇದ ಆಸ್ಪತ್ರೆಯನ್ನು ಪೂರ್ಣಪ್ರಮಾಣದಲ್ಲಿ ಕಾರ್ಯಾರಂಭಿಸುವ ಪ್ರಕ್ರಿಯೆ ಕೈಗೊಳ್ಳಲಾಗುವುದು.